**<u>ಸಾಕ್ಷಿಯನ್ನು ದಿನಾಂಕ 07.06.2023 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀಮತಿ ಕೆ ಕೆ ಪಿ ವಕೀಲರಿಂದಃ-</u>**

ನಾನು ಈ ದಿನ ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಆರೋಪಿಯು ನನಗೆ ರೂ. 4,00,000-00 ರೂ.ಗೆ ಕೊಟ್ಟಿರುವ ಅಂತರಘಟ್ಟೆ ಶಾಖೆಯ ಕರ್ನಾಟಕ ಬ್ಯಾಂಕ್ ಚೆಕ್ ಸಂಖ್ಯೆ 039274, ದಿನಾಂಕ 03.06.2022 ರ ಚೆಕ್ಕನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು ಹಾಗೂ ಆರೋಪಿಯ ಸಹಿಗಳನ್ನು ನಿಪಿ1(ಎ) ಮತ್ತು ನಿಪಿ1(ಬಿ) ಎಂದು, ಕೆನರಾ ಬ್ಯಾಂಕ್, ಹಿರೇನಲ್ಲೂರು ಶಾಖೆರವರು ನೀಡಿರುವ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 2 ಎಂದು, ದಿಃ 10.06.2022 ರಂದು ನಮ್ಮ ವಕೀಲರ ಮೂಲಕ ಆರೋಪಿಗೆ ಕಳುಹಿಸಲಾಗಿರುವ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 3 ಎಂದು, ಎರಡು ಅಂಚೆ ರಶೀದಿಗಳನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 4 ಮತ್ತು 5 ಎಂದು, ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 6 ಮತ್ತು 7 ಎಂದು ಗುರ್ತಿಸಲಾಯಿತು.

<u>ಪಾಟೀ ಸವಾಲುಃ</u> **ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸ ಇ ಎ ಒ

ಸ

3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಕಡೂರು